**ಪತ್ರಿಕಾ ಪ್ರಕಟಣೆ**

**ಬಿ.ಪ್ಯಾಕ್ ಮತ್ತು ಸಿಜಿಐ ಸಂಸ್ಥೆ ಮಲ್ಲೇಶ್ವರಂ ಮತ್ತು ಮಹದೇವಪುರ ಕ್ಷೇತ್ರಗಳ ಬಿ.ಸೇಫ್ ಕ್ಷೇತ್ರ ಸಾರ್ವಜನಿಕ ಸ್ಥಳಗಳ ಸುರಕ್ಷತ ಸಮೀಕ್ಷಾ ವರದಿಯನ್ನು ಬಿಡುಗಡೆ ಮಾಡಿದೆ**

**ಮಾರ್ಚ್ 19, 2022, ಬೆಂಗಳೂರು**

ಬೆಂಗಳೂರು ರಾಜಕೀಯ ಕ್ರಿಯಾ ಸಮಿತಿ (ಬಿ.ಪ್ಯಾಕ್) ಮತ್ತು ಸಿಎಸ್‌ಆರ್ ಸಹಭಾಗಿಗಳಾದ ಸಿಜಿಐ ಸಂಸ್ಥೆಯು, **ಮಲ್ಲೇಶ್ವರಂ** ಮತ್ತು **ಮಹಾದೇವಪುರ** ವಿಧಾನಸಭಾ ಕ್ಷೇತ್ರಗಳ **ಬಿ.ಸೇಫ್ ಕ್ಷೇತ್ರ ಸಾರ್ವಜನಿಕ ಸ್ಥಳಗಳ ಸುರಕ್ಷತ ಸಮೀಕ್ಷಾ ವರದಿಯನ್ನು ಶ್ರೀ ಅರವಿಂದ್ ಲಿಂಬಾವಳಿ,** ಶಾಸಕರು, ಮಹಾದೇವಪುರ ವಿಧಾನಸಭಾ ಕ್ಷೇತ್ರ, **ಪ್ರಣಿತ ಸುಭಾಷ್,** ನಟಿ ಹಾಗೂ ಬಿ.ಸೇಫ್ ಕಾರ್ಯಕ್ರಮದ ಬ್ರಾಂಡ್ ರಾಯಭಾರಿ, **ಡಾ. ರಾಹುಲ್ ಘೋಡ್ಕೆ**, ಹಿರಿಯ ಉಪಾಧ್ಯಕ್ಷ, ಸಿಜಿಐ ಇವರ ಸಮುಖದಲ್ಲಿ ಬಿಡುಗಡೆ ಮಾಡಲಾಯಿತು.

ಮಹಿಳಾ ಸುರಕ್ಷತೆಯ ವಿಚಾರವೂ ಮಹಿಳೆಯರ ಸಬಲಿಕರಣಕದಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ಬಿ.ಸೇಫ್ ಕ್ಷೇತ್ರ ಬೆಂಗಳೂರು ರಾಜಕೀಯ ಕ್ರಿಯಾ ಸಮಿತಿಯ (**B.PAC)** ಒಂದು ವಿಶಿಷ್ಟ ಉಪಕ್ರಮವಾಗಿದ್ದು, ವಿವಿಧ ಪಾಲುದಾರರು, ಸಮುದಾಯಗಳು ಮತ್ತು ವಿಷಯ ತಜ್ಞರನ್ನು ಒಂದು ಸಮಾನ ವೇದಿಕೆಗೆ ತರುತ್ತದೆ ಸಾರ್ವಜನಿಕ ಸ್ಥಳಗಳ ಸಮೀಕ್ಷೆ, ಸಮುದಾಯ ಜಾಗೃತಿ, ಹಾಗೂ ಹಲವು ಸುರಕ್ಷತಾ ಶಿಫಾರಸ್ಸುಗಳ ಮೂಲಕ ಆ ಕ್ಷೇತ್ರವನ್ನು ಮಹಿಳೆಯರಿಗೆ ಸುರಕ್ಷಿತವಾಗಿರುವಂತೆ ಮಾಡುತ್ತದೆ. **ಬಿ.ಸೇಫ್ ರಾಯಭಾರಿಗಳ** ಮೂಲಕ ಈ ಉಪಕ್ರಮವನ್ನು ವಾರ್ಡ್ ಮಟ್ಟದಲ್ಲಿ ಪರಿಣಾಮಕಾರಿಯಾಗಿ ಜಾರಿಗೊಳಿಸಲಾಗಿದೆ. **ಸಿಜಿಐ** ಕೆನಡಾ ಮೂಲದ ಜಾಗತಿಕ ತಂತ್ರಜ್ಞಾನ ಮತ್ತು ವಾಣಿಜ್ಯ ಸಲಹಾ ಸಂಸ್ಥೆಯಾಗಿದ್ದು ಈ ಕಾರ್ಯಕ್ರಮದ ಸಿಎಸ್‌ಆರ್ ಭಾಗವಾಗಿದೆ. ಬಿ.ಸೇಫ್ ಕ್ಷೇತ್ರ ಉಪಕ್ರಮವು ನಗರ ಎರಡು ವಿಧಾನಸಭಾ ಕ್ಷೇತ್ರಗಳಾದ - ಮಹಾದೇವಪುರ ಹಾಗೂ ಮಲ್ಲೇಶ್ವರಂ ನಲ್ಲಿ ಹಮ್ಮಿಕೊಳ್ಳಲಾಗಿತ್ತು.

ಮಹಾದೇವಪುರ ಹಾಗೂ ಮಲ್ಲೇಶ್ವರಂ ವಿಧಾನಸಭಾ ಕ್ಷೇತ್ರಗಳ ಬಿ. ಸೇಫ್ ಕ್ಷೇತ್ರ ಸಾರ್ವಜನಿಕ ಸ್ಥಳಗಳ ಸುರಕ್ಷತಾ ಸಮೀಕ್ಷಾ ವರದಿಯು ಒಟ್ಟು 260 ಸಾರ್ವಜನಿಕ ಸ್ಥಳಗಳಲ್ಲಿ ನಡೆಸಿದ ಸಮೀಕ್ಷಾ ವಿಶ್ಲೇಷಣೆಯನ್ನು ಒಳಗೊಂಡಿದೆ. ವಿಶ್ಲೇಷಣೆಯ ಆಧಾರದ ಮೇಲೆ, ಪ್ರತಿ ವಾರ್ಡ್‌ನ ಕಾರ್ಯಕ್ಷಮತೆ, ವಾರ್ಡ್ವಾರು ಹೋಲಿಕೆ ಮತ್ತು ವಾರ್ಡ್ ಮಟ್ಟದ ಅಂಕಗಳು ನೀಡಲಾಗಿದೆ. ವರದಿಯು ಕ್ರಿಯಾ ಯೋಜನೆ ಮತ್ತು ಮಹಿಳೆಯರ ಸುರಕ್ಷತೆ ಮತ್ತು ಸಬಲೀಕರಣದ ಕುರಿತು ಮಾದರಿ ಕ್ಷೇತ್ರವಾಗಿ ಹೊರಹೊಮ್ಮುವ ಮಾರ್ಗವನ್ನು ಒಳಗೊಂಡಿದೆ.

ಸಾರ್ವಜನಿಕ ಸ್ಥಳಗಳಲ್ಲಿ ಮಹಿಳೆಯರ ಸುರಕ್ಷತೆಯನ್ನು ಹೆಚ್ಚಿಸುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ. ಈ ಕಾರ್ಯಾಗಾರಕ್ಕೆ ಒಟ್ಟು 45 ಯುವ ಉತ್ಸಾಹಿ ಮಹಿಳೆಯರನ್ನು ಬಿ.ಸೇಫ್ ರಾಯಭಾರಿಗಳಾಗಿ ಆಯ್ಕೆಮಾಡಲಾಯಿತು. ಇವರ ಪೈಕಿ ಮಹಾದೇವಪುರ ವಿಧಾನಸಭಾ ಕ್ಷೇತ್ರದಿಂದ 22 ಹಾಗೂ ಮಲ್ಲೇಶ್ವರಂ ವಿಧಾನಸಭಾ ಕ್ಷೇತ್ರದಿಂದ 23 ಮಹಿಳೆಯರನ್ನು ಆಯ್ಕೆಮಾಡಲಾಗಿತ್ತು, ಈ ರಾಯಭಾರಿಗಳು ಮಹಿಳಾ ಸುರಕ್ಷತೆ, ಸಬಲೀಕರಣಕ್ಕಾಗಿ ಸರ್ಕಾರದಿಂದಿರುವ ಯೋಜನೆಗಳು, ಆರ್ಥಿಕ ಸಾಕ್ಷರತೆ, ಸಾರ್ವಜನಿಕ ಸ್ಥಳಗಳಲ್ಲಿ ಸುರಕ್ಷತೆಯ ಮೌಲ್ಯ ಮಾಪನ, ಪೋಲೀಸ್ ಮತ್ತು ಇತರ ವಿಷಯಗಳ ಬಗ್ಗೆ ವಿಷಯತಜ್ಞರಿಂದ ತರಬೇತಿ ನಡೆಸಲಾಗಿತ್ತು.

ತರಬೇತಿ ಮುಗಿದ ನಂತರ, ಸಾರ್ವಜನಿಕ ಸ್ಥಳಗಳ ಮೂಲಸೌಕರ್ಯ ವ್ಯವಸ್ಥೆಯ ಕುರಿತು ತಿಳಿಯಲು ಹಾಗೂ ಸೌಕರ್ಯದ ಗುಣಮಟ್ಟವನ್ನು ಸುಧಾರಿಸುವ ನಿಟ್ಟಿನಲ್ಲಿ ಇವರು 2021 - 22 ಸಾಲಿನಲ್ಲಿ, 260 ಸಾರ್ವಜನಿಕ ಸ್ಥಳಗಳು ಮತ್ತು 108 ರಸ್ತೆಗಳ ಸುರಕ್ಷತಾ ಸಮೀಕ್ಷೆಯನ್ನು ನಡೆಸಿದರು. ಎರಡು ವಿಧಾನಸಭಾ ಕ್ಷೇತ್ರಗಳನ್ನು ಒಳಗೊಂಡಂತೆ, 23 ಅಂಗನವಾಡಿ ಕೇಂದ್ರಗಳು, 71 ಬಸ್ ನಿಲ್ದಾಣಗಳು, 41 ಮೊದಲ ಹಾಗೂ ಕೊನೆಯ ಹಂತದ ಸಾರ್ವಜನಿಕ ಸಾರಿಗೆಯ ಸಂಪರ್ಕ ವ್ಯವಸ್ಥೆ, 30 ಮಾರುಕಟ್ಟೆಗಳು, 37 ಉದ್ಯಾನವನಗಳು, 14 ಪಿಎಚ್‌ಸಿಗಳು, 12 ಪೊಲೀಸ್ ಠಾಣೆಗಳು, 32 ಸಾರ್ವಜನಿಕ ಶೌಚಾಲಯಗಳನ್ನು ಮಹಿಳೆಯರು ನಿಯಮಿತವಾಗಿ ಬಳಸುವ ಈ 8 ರೀತಿಯ ಸಾರ್ವಜನಿಕ ಸ್ಥಳಗಳಲ್ಲಿ ಸುರಕ್ಷತಾ ಸಮೀಕ್ಷೆಯನ್ನು ನಡೆಸಲಾಯಿತು.

ಮಹದೇವಪುರ ವಿಧಾನಸಭಾ ಕ್ಷೇತ್ರದ 8 ಬಿಬಿಎಂಪಿ ವಾರ್ಡ್‌ಗಳು ಮತ್ತು ಮಲ್ಲೇಶ್ವರಂ ವಿಧಾನಸಭಾ ಕ್ಷೇತ್ರದ 7 ಬಿಬಿಎಂಪಿ ವಾರ್ಡ್‌ಗಳಲ್ಲಿ ಸಂಗ್ರಹಿಸಿದ ಮಾದರಿ ದತ್ತಾಂಶಗಳ ವಿಶ್ಲೇಷಣೆಯಲ್ಲಿ, ಈ ಕೆಳಗಿನಲ್ಲಿ ತಿಳಿಸಿರುವ ಕಾರ್ಯ ತಂತ್ರಗಳನ್ನು ಅಳವಡಿಸುವ ಮೂಲಕ ಎರಡೂ ಕ್ಷೇತ್ರಗಳ ಒಟ್ಟಾರೆ ಸಾರ್ವಜನಿಕ ಸ್ಥಳಗಳ ಸುರಕ್ಷತಾ ಅಂಕಗಳನ್ನು ಸುಧಾರಿಸಬಹುದು ಎಂದು ತಿಳಿದುಬಂದಿದೆ.

ಎರಡು ವಿಧಾನಸಭಾ ಕ್ಷೇತ್ರಗಳಲ್ಲಿ ತಕ್ಷಣಕ್ಕೆ ಸುಧಾರಿಸಬೇಕಾದ ವಿಷಯಗಳು ಕೆಲಕಂಡಂತಿವೆ.

1. ಬಸ್ ನಿಲ್ದಾಣಗಳಲ್ಲಿ ಜನ ಸ್ನೇಹಿ ನಕ್ಷೆ/ಪ್ರಯಾಣಿಕರ ಮಾಹಿತಿ ವ್ಯವಸ್ಥೆ, ಉತ್ತಮ್ಮ ಬೆಳಕಿನ ವ್ಯವಸ್ಥೆ, ಪಾದಾಚಾರಿಮಾರ್ಗಗಳು, ಗುಣಮಟ್ಟದ ಆಸನ ವ್ಯವಸ್ಥೆ ಮತ್ತು ಬೀದಿ ದೀಪಗಗಳಂತಹ ಮೂಲಸೌಕರ್ಯವನ್ನು ಸುಧಾರಿಸಬೇಕು

2. ಉದ್ಯಾನವನಗಳು, ಮೊದಲ ಹಾಗೂ ಕೊನೆಯ ಹಂತದ ಸಾರ್ವಜನಿಕ ಸಾರಿಗೆಯ ಸಂಪರ್ಕ ವ್ಯವಸ್ಥೆ, ಮತ್ತು ಅಂಗನವಾಡಿಗಳಲ್ಲಿ ಮೂಲ ಸೌಕರ್ಯಗಳು ಸುಧಾರಿಸಬೇಕಿದೆ.
3.

ಈ ಎಲ್ಲಾ ಅಂಶಗಳನ್ನು ಪೂರ್ಣ ಪ್ರಮಾಣದಲ್ಲಿ ಜಾರಿಗೊಳಿಸಿದರೆ ಮಹಾದೇವಪುರ ಹಾಗೂ ಮಲ್ಲೇಶ್ವರಂ ಕ್ಷೇತ್ರಗಳು ಮಹಿಳಾ ಸಬಲಿಕರಣ ಹಾಗೂ ಸುರಕ್ಷತೆಯ ವಿಷಯದಲ್ಲಿ ಮಾದರಿ ವಿಧಾನಸಭಾ ಕ್ಷೇತ್ರಗಲಾಗಿ ಹೊರಹೊಮ್ಮುತ್ತವೆ.

ಈ ಶಿಫಾರಸ್ಸುಗಳನ್ನು ಬಿ.ಪ್ಯಾಕ್ ನ ಬಿ.ಸೇಫ್ ರಾಯಭಾರಿಗಳ ಮೂಲಕ ಪ್ರಮುಖ ಪಾಲುದಾರರಾದ ಬಿಬಿಎಂಪಿ, ಬಬಿಎಂಟಿಸಿ, ವಾರ್ಡ್ ಕಮಿಟಿಗಳು, ಚುನಾಯಿತ ಪ್ರತಿನಿಧಿಗಳು ಇವರೆಲ್ಲರೂ ಜನರೊಂದಿಗೆ ಒಟ್ಟಾಗಿ ಸೇರಿ ಈ ಅಂಶಗಳನ್ನು ಜಾರಿಗೊಳಿಸಿ ಸುರಕ್ಷಿತ ಕ್ಷೇತ್ರವನ್ನಾಗಿ ಮಾಡಬೇಕು.

ವರದಿ ಬಿಡುಗಡೆಯ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡುತ್ತಾ, **ಶ್ರೀ ಅರವಿಂದ್ ಲಿಂಬಾವಳಿ, ಶಾಸಕರು, ಮಹದೇವಪುರ ವಿಧಾನಸಭಾ ಕ್ಷೇತ್ರ,** "ಬಿ.ಸೇಫ್ ಕ್ಷೇತ್ರ ಕಾರ್ಯಕ್ರಮವು ಬೆಂಗಳೂರಿನಂತಹ ಬೆಳೆಯುತ್ತಿರುವ ನಗರಗಳಿಗೆ ಬಹಳ ಅವಶ್ಯಕವಾದದ್ದು. ಈ ಕಾರ್ಯಕ್ರಮದಲ್ಲಿ ಮಹದೇವಪುರ ಕ್ಷೇತ್ರವನ್ನು ಆಯ್ಕೆ ಮಾಡಿಕೊಂಡಿದ್ದಕಾಗಿ, ಬಿ.ಸೇಫ್ ರಾಯಭಾರಿಗಳಿಗೆ ತರಬೇತಿ ನೀಡಿದ್ದಕ್ಕಾಗಿ ಮತ್ತು ನಮ್ಮ ಕ್ಷೇತ್ರದಲ್ಲಿ ಮಹಿಳಾ ಸುರಕ್ಷತೆಯನ್ನು ಬೆಂಬಲಿಸಲು, ಸೌಲಭ್ಯಗಳನ್ನು ಸುಧಾರಿಸಲು ಶಿಫಾರಸ್ಸುಗಳನ್ನು ನೀಡಿದ್ದಕ್ಕಾಗಿ ನಾನು ಬಿ.ಪ್ಯಾಕ್ ಸಂಸ್ಥೆಗೆ ಧನ್ಯವಾದಗಳನ್ನು ತಿಳಿಸಲು ಇಚ್ಛಿಸುತ್ತೇನೆ. ಮುಂಬರುವ ದಿನಗಳಲ್ಲಿ ನಮ್ಮ ತಂಡವು ಸಮೀಕ್ಷೆಯಿಂದ ಹೊರಬಂದಿರುವ ಶಿಫಾರಸ್ಸುಗಳನ್ನು ಒಂದು ವರ್ಷದೊಳಗೆ ಜಾರಿಗೊಳಿಸಲು ಕೆಲಸ ಮಾಡುತ್ತೇವೆ.

ವಿಡಿಯೋ ಸಂದೇಶದ ಮೂಲಕ **ಕರ್ನಾಟಕ ಸರ್ಕಾರದ ಮಂತ್ರಿಗಳು ಹಾಗೂ ಮಲ್ಲೇಶ್ವರಂ ವಿಧಾನಸಭಾ ಕ್ಷೇತ್ರದ ಶಾಸಕರು ಡಾ. ಸಿ ಎನ್ ಅಶ್ವಥ್ ನಾರಯಣ** ಅವರು, "ಬಿ.ಸೇಫ್ ಕ್ಷೇತ್ರ ಕಾರ್ಯಕ್ರಮವು ಮಹಿಳಾ ಸುರಕ್ಷತೆ ಮತ್ತು ಸಬಲೀಕರಣದ ವಿಷಯವನ್ನು ಅಧ್ಯತೆಯ ಮೇರೆಗೆ ಸರ್ಕಾರ, ಚುನಾಯಿತ ಪ್ರತಿನಿಧಿಗಳು, ನಾಗರಿಕ ಸಂಸ್ಥೆಗಳು ಮತ್ತು ನಾಗರಿಕರ ಗಮನವನ್ನು ಸೆಳೆಯಲು ಸಹಾಯ ಮಾಡಿದೆ. ಎಲ್ಲರೂ ಕೈ ಜೋಡಿಸಿ ಕೆಲಸ ನಿರ್ವಹಿಸುವುದರಿಂದ ಸಮಾಜದ ಎಲ್ಲಾ ವರ್ಗದ ಜನರಿಗೂ ಸುರಕ್ಷಿತ ನಗರವನ್ನು ಸೃಷ್ಟಿಸಬಹುದು ಎಂದು ಅಭಿಪ್ರಾಯಪಟ್ಟರು.

**ಕಿರಣ್ ಮಜುಂದಾರ್ ಶಾ, ಅಧ್ಯಕ್ಷರು, ಬಿ.ಪ್ಯಾಕ್** ವರದಿ ಬಿಡುಗಡೆಯ ಸಂದರ್ಭದಲ್ಲಿ ವಿಡಿಯೋ ಮೂಲಕ ಮಾತನಾಡುತ್ತಾ, ಒಂದು ನಗರ ಸಮೃದ್ಧವಾಗಿ ಬೆಳೆಯಲು ಮಹಿಳಾ ಸುರಕ್ಷತೆ ಬಹಳ ಮುಖ್ಯ ಪಾತ್ರವಹಿಸುತ್ತದೆ.

ಬೆಂಗಳೂರು ನಗರದಲ್ಲಿ ಸುರಕ್ಷಿತ ಸಾರ್ವಜನಿಕ ಸ್ಥಳಗಳನ್ನು ಸೃಷ್ಟಿಸಲು ಉದ್ದೇಶಿಸಿರುವ ಬಿ.ಸೇಫ್ ಕ್ಷೇತ್ರ ಕಾರ್ಯಕ್ರಮದ ಬಗ್ಗೆ ನನಗೆ ಹೆಮ್ಮೆ ಇದೆ. ಬಿ.ಪ್ಯಾಕ್ ನ ಈ ಉಪಕ್ರಮವು ಕೇವಲ ಕರ್ನಾಟಕದಲ್ಲಿ ಅಷ್ಟೇ ಅಲ್ಲದೆ ಭಾರತದ ಯಾವುದೇ ನಗರದಲ್ಲಾದರೂ ಸಹ ಇದನ್ನು ಜಾರಿಗೊಳಿಸಬಹುದು.

ರೇವತಿ ಅಶೋಕ್, ವ್ಯವಸ್ಥಾಪಕ ಟ್ರಸ್ಟಿ ಮತ್ತು ಮುಖ್ಯಸ್ಥರು, ಕಾರ್ಯಕ್ರಮದ ಬಗ್ಗೆ ಪರಿಚಯ ನೀಡಿದರು.

ವರದಿ ಬಿಡುಗಡೆ ಕಾರ್ಯಕ್ರಮದ ನಂತರ **"ಬೆಂಗಳೂರಿನಲ್ಲಿ ಸುರಕ್ಷಿತ ಸಾರ್ವಜನಿಕ ಸ್ಥಳಗಳನ್ನು ಸೃಷ್ಟಿಸುವುದು ಹೇಗೆ"** ಎಂಬ ವಿಷಯದ ಕುರಿತು ಸಂವಾದ ಕಾರ್ಯಕ್ರಮವನ್ನು ನಡೆಸಲಾಯಿತು. **ಡಾ. ಬಿ.ಆರ್.ರವಿ ಕಾಂತೇಗೌಡ**, ಐಪಿಎಸ್, ಜಂಟಿ ಪೊಲೀಸ್ ಆಯುಕ್ತರು, **ಶ್ರೀಮತಿ ರಾಧಿಕಾ ಜಿ**, ಐಪಿಎಸ್, ನಿರ್ದೇಶಕರು (ಎಸ್&ವಿ), ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, **ಶ್ರೀ ಡಾ. ದೀಪಕ್ ಕೆ ಎಲ್**, ವಿಶೇಷ ಆಯುಕ್ತರು, ಪಶ್ಚಿಮ ವಲಯ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು **ಶ್ರೀಮತಿ ಸಪ್ನಾ ಕರೀಂ**, ಮುಖ್ಯಸ್ಥರು, ನಾಗರಿಕ ಭಾಗವಹಿಸುವಿಕೆ, ಜನಾಗ್ರಹ ಸಂಸ್ಥೆ, ಸಂವಾದ ಕಾರ್ಯಕ್ರಮದ ಭಾಗವಾಗಿದ್ದರು.

ಸಮೀಕ್ಷಾ ವರದಿ, ಸಮೀಕ್ಷಾ ಸಾರಾಂಶ, ಮತ್ತು ಶಿಫಾರಸ್ಸುಗಳ ಕುರಿತು ಹೆಚ್ಚಿನ ಮಾಹಿತಿಗಾಗಿ ಕ್ಲಿಕ್ ಮಾಡಿ:

- ಮಹಾದೇವಪುರ ವಿಧಾನಸಭಾ ಕ್ಷೇತ್ರದ ಬಿ.ಸೇಫ್ ಕ್ಷೇತ್ರ ಸಾರ್ವಜನಿಕ ಸ್ಥಳಗಳ ಸಮೀಕ್ಷಾ ವರದಿ.
- ಮಲ್ಲೇಶ್ವರಂ ವಿಧಾನಸಭಾ ಕ್ಷೇತ್ರದ ಬಿ.ಸೇಫ್ ಕ್ಷೇತ್ರ ಸಾರ್ವಜನಿಕ ಸ್ಥಳಗಳ ಸಮೀಕ್ಷಾ ವರದಿ

ಬಿ.ಪ್ಯಾಕ್ ಸಂಸ್ಥೆಯು ಬೆಂಗಳೂರಿನ ಇತರೆ ಬಿಬಿಎಂಪಿ ವಲಯಗಳಲ್ಲಿ ಬಿ.ಸೇಫ್ ಕ್ಷೇತ್ರ ಕಾರ್ಯಾಗಾರವನ್ನು ನಡೆಸಲು ಇಚ್ಛಿಸುತ್ತದೆ.

ಬಿ. ಸೇಫ್ ಕ್ಷೇತ್ರದ ಬಗೆಗಿನ ಹೆಚ್ಚಿನ ಮಾಹಿತಗಾಗಿ - https://bpac.in/b-safe-constituency/

**ಹೆಚ್ಚಿನ ಮಾಹಿತಿಗಾಗಿ**

ಸಚಿನ್ ಎ ಟಿ | sachiin@bpac.in | 7349542201

ಅಮೃತ್ ಬಿ | amruth@bpac.in | 91646 04632

ಸಿರಿ ಟಿ ಕೆ | siri@bpac.in | 7975720130

---

**About B.PAC**

Bangalore Political Action Committee (B.PAC) is a non-partisan nonprofit organization that aims to improve governance in Bengaluru and to enhance the quality of life of every citizen. B.PAC is specifically targeting good governance practices, integrity and transparency in all arms of the

government, improving the quality of infrastructure in the city, and identification and support of strong candidates for public office at all levels of governance in Bengaluru city. Learn more at https://bpac.in/

**About B.SAFE, Women & Child Safety Program**

B.SAFE is a program committed to advocating the safety of women and children at workplaces, educational institutions, public spaces and transportation. Learn more at https://bpac.in/b-safe/

**About CGI:**

Founded in 1976, CGI is among the largest IT and business consulting services firms in the world.

Insights-driven and outcomes-based they help accelerate returns on IT and business investments. Across 21 industry sectors in 400 locations worldwide, 80,000 professionals provide comprehensive, scalable, and sustainable IT and business consulting services that are informed globally and delivered locally. Learn more at https://www.cgi.com/